

# ಆಬಿದ್ ಸುರ್ತಿ

## ಸೋರುವ ನಲ್ಲಿಯ ಚಿಕಿತ್ಸಕ

**ಸೋರುವ ನಲ್ಲಿಗಳ ಮೂಗು ಮುಚ್ಚುವ ಕೆಲಸದಲ್ಲಿ ತೊಡಗಿಕೊಂಡಿರುವ ಮುಂಬಯಿಯ ಆಬಿದ್ ಸುರ್ತಿ, ಈವರೆಗೆ 1 ಕೋಟಿ ಲೀಟರ್‌ಗೂ ಹೆಚ್ಚು ನೀರು ಉಳಿಸಿದ್ದಾರಂತೆ. ನೀರಿನ ಸಂಕಟದ ಕಾಲದಲ್ಲಿ 'ಆಬಿದ್ ಮಾದರಿ' ಅನುಕರಣೀಯ.**

■ ಎ. ರಾಮು

**ಟಕ್ ಟಕ್ ಟಕ್...**

ಒಂದೇ ಕಣ್ಣಿನಲ್ಲಿ ಅಳುವ ಮಗುವಿನಂತೆ ಮನೆಯ ನಲ್ಲಿ ತೊಟ್ಟಿಕ್ಕುತ್ತಿದೆಯೇ? ಎಚ್ಚರ, ಅಲ್ಲೆಲ್ಲಾದರೂ ಆಬಿದ್ ಸುರ್ತಿ ಸುಳಿದಾಡುತ್ತಿರಬಹುದು! ಅವರ ಕಿವಿಗೇನಾದರೂ ನಲ್ಲಿ ಸೋರುವ ಸದ್ದು ಕೇಳಿಸಿದರೆ, ಅವರು ಮನೆಯ ಬಾಗಿಲು ತಟ್ಟುವುದು ಖಚಿತ.

ಆಬಿದ್ ಸುರ್ತಿ ಮುಂಬಯಿಯವರು. ಮುಂಬಯಿಯ ಬೀದಿಗಳಲ್ಲಿ ಅಲೆಯುವಾಗ ಅವರ ಮೈಯೆಲ್ಲ ಕಿವಿಯಾಗಿರುತ್ತದೆ. ನಲ್ಲಿ ಸೋರಿಕೆಯ ಶಬ್ದ ಕೇಳಿಸಿದರೆ ಸಾಕು, ಅಲ್ಲಿಗೆ ಹೋಗಿ ನಲ್ಲಿಯ ಮೂಗು ಬಿಗಿಗೊಳಿಸುವವರೆಗೂ ಅವರಿಗೆ ಸಮಾಧಾನವಿಲ್ಲ. ಆ ಕೆಲಸಕ್ಕಾಗಿಯೇ ಅವರು ತಮ್ಮೊಂದಿಗೆ ಒಬ್ಬ ಪ್ಲಂಬರ್‌ನನ್ನೂ ಸದಾ ಜೊತೆಗಿಟ್ಟುಕೊಂಡಿರುತ್ತಾರೆ. ವಾರದಲ್ಲಿ ಆರು ದಿನ ಬರವಣಿಗೆಗೆ, ಚಿತ್ರಕಲೆಗೆ ಮೀಸಲಿಡುವ ಅವರು, ಏಳನೇ ದಿನ ಪ್ಲಂಬರ್ ಹಾಗೂ ಸಹಾಯಕನ ಜೊತೆ ಮನೆಯಿಂದ ಮನೆಗೆ ನಡೆಯುತ್ತಾರೆ.

'ನೀರಿನ ಸಂರಕ್ಷಕ', 'ಪರಿಸರವಾದಿ' ಎಂದು ಹೇಳಿದ ಮಾತ್ರಕ್ಕೆ ಆಬಿದ್ ಪರಿಚಯ ಮುಗಿಯುವುದಿಲ್ಲ. ಲೇಖಕ, ವ್ಯಂಗ್ಯಚಿತ್ರಕಾರ, ಕಲಾವಿದ– ಹೀಗೆ ಅವರ ವ್ಯಕ್ತಿತ್ವಕ್ಕೆ ಹಲವು ಚಾಚುಗಳಿವೆ. ಆದರೆ, ಅವರನ್ನು ಜನ ಗುರ್ತಿಸಿರುವುದು ನೀರಿನ ಸಂರಕ್ಷಕನ ರೂಪದಲ್ಲಿ.

ದಶಕಗಳಿಂದ ಮುಂಬಯಿಯ ಮನೆಗಳನ್ನೂ ಅಪಾರ್ಟ್‌ಮೆಂಟ್‌ಗಳನ್ನೂ ಎಡತಾಕುವ ಅವರು ಪ್ರತಿ ಮನೆಯ ಬಾಗಿಲನ್ನೂ ತಟ್ಟುತ್ತಾರೆ. ಬಾಗಿಲು ತೆರೆದವರಿಗೆ ಒಂದೇ ಪ್ರಶ್ನೆ – 'ನಿಮ್ಮ ಮನೆಯ ನಲ್ಲಿ ಸೋರುತ್ತಿದೆಯೇ?'. 'ಇಲ್ಲ' ಎನ್ನುವ ಉತ್ತರ ಎದುರಾದರೆ, 'ತೊಂದರೆ ಕೊಟ್ಟಿದ್ದಕ್ಕೆ ದಯವಿಟ್ಟು ಕ್ಷಮಿಸಿ' ಎನ್ನುತ್ತ ಮತ್ತೊಂದು ಮನೆಗೆ ನಡಿಗೆ. ಅಲ್ಲಿ ನಲ್ಲಿ ಸೋರುತ್ತಿದ್ದರೆ ರಿಪೇರಿ ಭಾಗ್ಯ.

ಗೆಳೆಯರ ಅಥವಾ ಬಂಧುಗಳ ಮನೆಗೆ ಹೋದಾಗ, ಅಲ್ಲಿನ ನಲ್ಲಿಗಳತ್ತಲೇ ಆಬಿದ್‌ರ ಗಮನ. ಅವುಗಳು ಸೋರುತ್ತಿದ್ದರೆ ಸರಿಪಡಿಸುವಂತೆ ಹೇಳುತ್ತಾರೆ. 'ನಲ್ಲಿಯಿಂದ ನೀರು ತೊಟ್ಟಿಕ್ಕುವ ಶಬ್ದ ಕೇಳಿದರೆ ನನ್ನ ತಲೆಗೆ ಯಾರೋ ಸುತ್ತಿಗೆಯಿಂದ ಹೊಡೆದಂತೆ ಭಾಸವಾಗುತ್ತದೆ' ಎನ್ನುತ್ತಾರೆ.

ಆಬಿದ್ ಅವರು ಹುಟ್ಟಿ ಬೆಳೆದದ್ದೆಲ್ಲ ಮುಂಬಯಿಯಲ್ಲಿಯೇ. ಬಾಲ್ಯದಲ್ಲಿ, ತನ್ನ ಅಮ್ಮ ಬೆಳಗ್ಗೆ 4ಕ್ಕೇ ಎದ್ದು ಒಂದು ಬಕೆಟ್ ನೀರಿಗಾಗಿ ಸರತಿಸಾಲಿನಲ್ಲಿ ನಿಲ್ಲುತ್ತಿದ್ದ ದೃಶ್ಯ ಅವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಈಗ ಸೋರಿಕೆ ನೀರನ್ನು ಕಂಡಾಗಲೆಲ್ಲ ಅವರಿಗೆ ತೊಟ್ಟು ನೀರಿಗಾಗಿ ಜಗಳವಾಡುತ್ತಿದ್ದ ಜನರ ಬಾಲ್ಯದ ಚಿತ್ರಗಳೇ ಕಣ್ಮುಂದೆ ಬರುತ್ತವೆ.

ನಲ್ಲಿಯೊಂದರಿಂದ ಸೆಕೆಂಡ್‌ಗೊಂದು ತೊಟ್ಟು ಸೋರುತ್ತಿದೆ ಎಂದಾದರೆ, ಒಂದು ತಿಂಗಳಿಗೆ 1000 ಲೀಟರ್ ನೀರು ಚರಂಡಿಪಾಲಾದಂತೆ ಎನ್ನುವ ವರದಿಯೊಂದನ್ನು ನೆನಪಿಸಿಕೊಳ್ಳುವ ಅವರು, ಪ್ರತಿ ಹನಿಯನ್ನೂ ಸಂರಕ್ಷಿಸಬೇಕು ಎನ್ನುವ ಆಶಯವನ್ನು ಜನರಿಗೆ ಮುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ. 'ಡ್ರಾಪ್ ಡೆಡ್ ಫೌಂಡೇಶನ್' ಎನ್ನುವ ಏಕವ್ಯಕ್ತಿ ಸಂಸ್ಥೆಯನ್ನು ರೂಪಿಸಿಕೊಂಡು, 'save every drop, or drop dead' ಎನ್ನುತ್ತ ಮನೆ ಮನೆ ಬಾಗಿಲು ತಟ್ಟುತ್ತಿದ್ದಾರೆ. ಬಾಗಿಲು ತಟ್ಟಿದಾಗ ಆಬಿದ್ ಅವರನ್ನು ಸಂಶಯದಿಂದ ನೋಡಿದವರು ಸಾಕಷ್ಟು ಮಂದಿಯಿದ್ದಾರೆ. ಮುಖದ ಮೇಲೆ ಹೊಡೆದಂತೆ ಬಾಗಿಲು ಹಾಕಿದವರೂ ಇದ್ದಾರೆ. ಎಂಬತ್ತು ದಾಟಿದರೂ ಈ ಅಜ್ಜನಿಗೆ ಬುದ್ಧಿ ಬಂದಿಲ್ಲ ಎಂದು ನಕ್ಕವರೂ ಇದ್ದಾರೆ. 'ಕೆಲವು ಹನಿಗಳಿಗಾಗಿ ಹೀಗೇಕೆ ಆತಂಕಪಡುತ್ತೀರಿ?' ಎಂದು ಕಾಳಜಿಯಿಂದ ಕೇಳಿದವರೂ ಇದ್ದಾರೆ. ಅಂತಹವರಿಗೆಲ್ಲ ಒಂದೇ ಉತ್ತರ – 'ಇದು ಕೆಲವು ಹನಿಗಳ ಪ್ರಶ್ನೆಯಲ್ಲ. ಇದು ಪವಿತ್ರ ಗಂಗಾನದಿಯನ್ನು ಗಟಾರಕ್ಕೆ ಸುರಿದಂತೆ ಅಲ್ಲವೇ?'

ಆಬಿದ್‌ರೊಂದಿಗೆ ಒಬ್ಬ ಪ್ಲಂಬರ್ ಹಾಗೂ ಸಹಾಯಕ ಇರುತ್ತಾರಲ್ಲ, ಅವರ ಸಂಬಳಕ್ಕೆ ದುಡ್ಡು ಎಲ್ಲಿಂದ ಬರುತ್ತದೆ? 'ಮಾಡುತ್ತಿರುವ ಒಳ್ಳೆಯ ಕೆಲಸದ ಬಗ್ಗೆ ನಿಮಗೆ ನಂಬಿಕೆಯಿದ್ದರೆ, ಇಡೀ ವಿಶ್ವವೇ ನಿಮ್ಮ ಹಿಂದೆ ಇರುತ್ತದೆ. ನಿಮಗಾಗಿ ದೇವರೇ ನಿಧಿ ಸಂಗ್ರಾಹಕನ ಪಾತ್ರ ವಹಿಸುತ್ತಾನೆ' ಎನ್ನುತ್ತಾರೆ ಅಜ್ಜ. ಸಾಹಿತ್ಯ ಪ್ರಶಸ್ತಿ ರೂಪದಲ್ಲಿ ತಮ್ಮ ಕೈ ಸೇರಿದ 1 ಲಕ್ಷ ರೂಪಾಯಿಯ ಜೊತೆ ನೀರುಳಿಸುವ ಕೆಲಸ ಆರಂಭಿಸಿದ ಅಜ್ಜನಿಗೆ ಈಗ ಸಾರ್ವಜನಿಕರ ಬೆಂಬಲವೂ ದೊರೆಯುತ್ತಿದೆ. ಬಾಲಿವುಡ್‌ನ ಅಮಿತಾಭ್ ಬಚ್ಚನ್ ಅವರು ತಮ್ಮ ಟೀವಿ ಷೋನಲ್ಲಿ ಆಬಿದ್‌ರನ್ನು ಪರಿಚಯಿಸಿ, ಅವರ ಪ್ರತಿಷ್ಠಾನಕ್ಕೆ 10 ಲಕ್ಷ ರೂಪಾಯಿ ದೇಣಿಗೆ ನೀಡಿದ್ದಾರೆ.

ನೀರು ಉಳಿಸುವ ಕೆಲಸ ಸರ್ಕಾರಕ್ಕೆ ಮಾತ್ರ ಸೇರಿದ್ದಲ್ಲ, ಅದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಹೌದು ಎನ್ನುವ 'ಆಬಿದ್ ಮಾದರಿ' ನಮ್ಮೆಲ್ಲರ ದಾರಿಯೂ ಆಗಬೇಕು.

ಸುಬಿದ್‌ರ ನೀರ ಕಾಳಜಿಯ ಮಾತುಗಳಿಗೆ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/2LjWFgf